**<u>Witness is present and duly sworn on 20.01.2024.</u>**

**<u>Examination in chief for the defendant : by Sri. SRR counsel for defendant :</u>**

I have filed my affidavit in lieu of my chief examination in chief and whatever I stated in my affidavit is true and correct. The affidavit contains my signature.

I am producing the Special Power of Attorney executed by Smt. B.N.Ramadevi on 07.12.2017 and appointed me as her lawful attorney and it is marked as **Ex.D.1**.

(Plaintiff counsel prays time for cross examination. Time granted).

(Computerized to my dictation in the open court as deposed by the witness.)

**R. O. I. & A. C.,**

**(MAMTAZ)**
**IX Addl. C.C. & S.J., Bengaluru.**

(ಈಗಾಗಲೇ ನಿ.ಡಿ.1 ಎಂದು ರಿಟ್ ಪಿಟಿಷನ್ ನಂ.57526/2014 ವಾದಿ ಪರ ಪಾಟಿ ಸವಾಲಿನಲ್ಲಿ ಗುರುತಿಸಲ್ಪಟ್ಟಿದ್ದರಿಂದ ವಿಷೇಶ ಮೊಕ್ತ್ಯಾರು ನಾಮೆಯನ್ನು ನಿ.ಡಿ.1 ಎಂದು ಗುರುತಿಸಿದ್ದನ್ನು ನಿ.ಡಿ.2 ಎಂದು ಗುರುತಿಸಲಾಯಿತು.)

**<u>ದಿಃ-19-03-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.</u>**

**ಪಾಟಿಸವಾಲು : ವಾದಿ ಪರ ಶ್ರೀ. ಹೆಚ್.ಎಸ್.ಪಿ ವಕೀಲರಿಂದ :**

1. ನಾನು 2012 ರಲ್ಲಿ ನಿವೃತ್ತಿಯನ್ನು ಹೊಂದಿರುತ್ತೇನೆ. ವಾದಿ ಮತ್ತು ಪ್ರತಿವಾದಿಗಳ ನಡುವೆ ಮಾತ್ರ ಕ್ರಯದ ಬಗ್ಗೆ ವ್ಯವಹಾರಗಳು ನಡೆದಿವೆ ಎಂದರೆ ಸಾಕ್ಷಿಯು ಪ್ರತಿಯೊಂದು ಮಾತುಕತೆಗಳು ಮತ್ತು ವ್ಯವಹಾರಗಳು ನನ್ನ ಉಪಸ್ಥಿತಿಯಲ್ಲಿಯೇ ನಡೆದಿವೆ ಎಂದು ನುಡಿಯುತ್ತಾರೆ. ನಿ.ಪಿ.1 ರ ಕರಾರು ಪತ್ರದಲ್ಲಿ ನಾನು ಎಲ್ಲಿಯೂ ಸಾಕ್ಷಿಯಾಗಿ ಸಹಿಯನ್ನು ಹಾಕಿರುವುದಿಲ್ಲ. ನಾನು ವ್ಯವಹಾರ ನಡೆಯುವಾಗ ಇದ್ದೆ ಮತ್ತು ನನ್ನ ಉಪಸ್ಥಿತಿಯಲ್ಲಿಯೇ ನಡೆದಿದೆ ಎಂಬ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಸಾಕ್ಷಿಯು ಕರಾರು ಪತ್ರವನ್ನು ವಾದಿಯವರೇ ತಯಾರಿಸಿಕೊಂಡು ಬಂದಿದ್ದು ನನ್ನ ಎದುರೇ ಅವರುಗಳು ಮತ್ತು ಸಾಕ್ಷಿಗಳು ಸಹಿ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಸಹಿಯನ್ನು ಹಾಕುತ್ತೇನೆ ಎಂದಾಗ ವಾದಿಯವರೇ ಬೇಡ ಎಂದು ನುಡಿದಿರುತ್ತಾರೆ.

2. ಖರೀದಿ ಮಾಡಬೇಕು ಎಂದಿರುವ ಜಾಗವು ವಾದಿಯ ಮನೆಗೆ ತಾಗಿರುವ ಜಾಗ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಗಳು ಅಕ್ಕಪಕ್ಕದ ಮನೆಯವರಾದ್ದರಿಂದ ಇಬ್ಬರೂ ಪರಿಚಯವಿತ್ತು ಮತ್ತು ಚೆನ್ನಾಗಿ ಗೊತ್ತಿತ್ತು ಎಂದರೆ ಸರಿ. ವಾದಿಯವರು ವಾದ ಪತ್ರದ ಸ್ವತ್ತನ್ನು ಖರೀದಿಸಲು ಸಾಮರ್ಥ್ಯ ಹೊಂದಿದ್ದಾರೆ ಎಂದು ನನ್ನ ತಂಗಿ ಪ್ರತಿವಾದಿಗೆ ಗೊತ್ತಿತ್ತು ಎಂದರೆ ಸರಿ. ಸಾಕ್ಷಿ ಮುಂದುವರಿದು ವಾದಿಯವರಿಗೆ ಹೊಸಕೋಟೆಯಲ್ಲಿ 7 ಎಕರೆ ಜಮೀನು ಇದೆ ಅದನ್ನು ಮಾರಾಟ

ಮಾಡಿದ್ದು ಆ ಹಣದಲ್ಲಿ ಒಂದು ತಿಂಗಳ ಒಳಗೆ ವಾದ ಪತ್ರದ ಸ್ವತ್ತನ್ನು ಖರೀದಿಸುತ್ತೇನೆ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ.

3. ಪ್ರತಿಫಲದ ಒಂದು ಕೋಟಿ 45 ಲಕ್ಷ ಹಣವನ್ನು ಪೂರ್ತಿ ಕೊಡುತ್ತೇನೆ ಎಂದು ಹೇಳಿದಾಗ ನಾವು 5 ಲಕ್ಷ ಮಾತ್ರ ಸಾಕು ಎಂದು ಹೇಳಿದಂತೆ ಅವರು 5 ಲಕ್ಷ ಮಾತ್ರ ನೀಡಿದ್ದಾರೆ ಎಂದರೆ ಸರಿಯಲ್ಲ. ನಿ.ಪಿ.1 ಆದಂತಹ ಸಂದರ್ಭದಲ್ಲಿ ನಮಗೆ ಯೂನಿಯನ್ ಬ್ಯಾಂಕಿನಲ್ಲಿ ಸಾಲ ಇತ್ತು ಎಂದರೆ ಸರಿ. ವಾದ ಪತ್ರದ ಸ್ವತ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಸಾಲ ಪಡೆಯುವಾಗ ಬ್ಯಾಂಕಿಗೆ ನೀಡಿದ್ದೆವು ಎಂದರೆ ಸರಿ. ನಮ್ಮ ಬಳಿ ಇದ್ದ ಕೆಲವು ಮೂಲ ದಾಖಲೆಗಳನ್ನು ಮಾತ್ರ ಕರಾರು ಮಾಡುವ ಸಂದರ್ಭದಲ್ಲಿ ನೀಡುತ್ತೇವೆ ಎಂದು ಉಳಿದ ದಾಖಲೆಗಳನ್ನು ಸಾಲ ಮುಗಿದ ನಂತರ ಬ್ಯಾಂಕಿನಿಂದ ಪಡೆದು ನೀಡುತ್ತೇವೆ ಎಂದು ನಾವು ವಾದಿಗೆ ಹೇಳಿದ್ದೆವು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಕರಾರು ಪತ್ರದ 3 ನೇ ಪುಟದ 2 ನೇ ಖಂಡಿಕೆಯಲ್ಲಿ ಪ್ರತಿಫಲದ ಹಣವನ್ನು ವಾದಿಯವರು ನೇರವಾಗಿ ಬ್ಯಾಂಕಿಗೆ ಸಲ್ಲಿಸಿ ಅಲ್ಲಿಂದ ಮೂಲ ದಾಖಲೆಗಳನ್ನು ಪಡೆಯುವುದಾಗಿ ನಮೂದಿಸಲಾಗಿದೆ ಎಂದು ನುಡಿಯುತ್ತಾರೆ. ವಾದಿಯು ನೀಡಿದ ಮುಂಗಡ ರೂ.5,00,000/-ವನ್ನೇ ಬ್ಯಾಂಕಿಗೆ ನೀಡಿ ದಾಖಲೆಗಳನ್ನು ಪಡೆದು ವಾದಿಗೆ ನೀಡಬಹುದಿತ್ತು ಎಂಬ ಪ್ರಶ್ನೆಗೆ ಸಾಕ್ಷಿಯು ಬ್ಯಾಂಕಿನ ಸಾಲವು ಅದಕ್ಕಿಂತ ಜಾಸ್ತಿ ಇತ್ತು ಎಂದು ನುಡಿಯುತ್ತಾರೆ.

4. ನಿ.ಪಿ.1 ರಲ್ಲಿ ಪುಟಸಂಖ್ಯೆ 3 ಖಂಡಿಕೆ 3 ರಲ್ಲಿ ನಾನು ಕೆಲವೊಂದು ಕ್ರಯ ಪತ್ರ, ಖಾತಾ ಸರ್ಟಿಫಿಕೇಟ್ ಮತ್ತು ಖಾತಾ ನಕಲು, ಮೂಲ ದಾಖಲೆ ಮತ್ತು ಇಸಿ, ಸ್ಯಾಂಕ್ಷನ್ ಪ್ಲಾನ್ ಮತ್ತು ಇಸಿ, ಆಸ್ತಿ ತೆರಿಗೆ ರಶೀದಿಗಳನ್ನು ನೊಂದಣಿ ಸಮಯದಲ್ಲಿ ಕೊಡಬೇಕಾಗಿದೆ ಎಂದು ನಮೂದು ಇದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿದಿದ್ದು ಮುಂದುವರಿದು ಕರಾರು ಪತ್ರ ಆಗುವ ಮೊದಲು ಒಂದು ಸೆಟ್ ಎಲ್ಲಾ ದಾಖಲೆಗಳನ್ನು ವಾದಿಗೆ ನೀಡಿದ್ದಲ್ಲದ್ದೇ ಕರಾರು ಪತ್ರದ ದಿನವೂ ಮೇಲಿನ ಎಲ್ಲಾ ದಾಖಲೆಗಳ ಒಂದು ಸೆಟನ್ನು ಆತನಿಗೆ ನೀಡಲಾಗಿದೆ ಎಂದು ನುಡಿಯುತ್ತಾರೆ. ಆ ರೀತಿ ಯಾವುದೇ ದಾಖಲೆಗಳನ್ನು ನಾನು ಕೊಟ್ಟಿಲ್ಲ ಒಂದು ವೇಳೆ ಕೊಟ್ಟಿದ್ದರೆ ನಿ.ಪಿ.1 ರಲ್ಲಿ ಹಾಗೆ ಬರೆಯುವ ಪ್ರಮೇಯ ಇರುತ್ತಿರಲಿಲ್ಲ ಎಂದರೆ ಸರಿಯಲ್ಲ.

5. ನಿ.ಪಿ.1 ರಲ್ಲಿ ಪುಟಸಂಖ್ಯೆ 3 ಖಂಡಿಕೆ 3 ರಲ್ಲಿ ಮುಂದುವರಿದು ವಾದಿಯವರು ಬ್ಯಾಂಕಿನಿಂದ ಸಾಲ ಪಡೆಯಲು ಹೋದಾಗ ಬೇಕಾಗುವಂತಹ ದಾಖಲೆಗಳನ್ನ ಪ್ರತಿವಾದಿ ನೀಡಬೇಕೆಂದು ನಮೂದು ಇದೆ ಎಂದರೆ ಸರಿ. ನಿ.ಪಿ.1 ರ ಮೇಲೆ ಹೇಳಿದ ದಾಖಲೆಗಳನ್ನು ಕರಾರು ಪತ್ರವಾದ ನಂತರ ವಾದಿಗೆ ಕೊಟ್ಟಿಲ್ಲ ಎಂದರೆ ಸಾಕ್ಷಿಯು ಕರಾರು ಪತ್ರವಾದ ದಿನವೇ ನೀಡಿರುತ್ತೇವೆ ನಂತರ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ.

6. ನಿ.ಪಿ.1 ರಲ್ಲಿ ನಮೂದಿಸಿರುವ ವಿಳಾಸವು ಸರಿಯಾಗಿದ್ದು ಅದು ಪ್ರತಿವಾದಿಯವರ ತಾಯಿಯ ಮನೆಯ ಸರಿಯಾದ ವಿಳಾಸವಾಗಿದೆ. ಈ ವಿಳಾಸದಲ್ಲಿ 4 ನೇ ಬ್ಲಾಕ್ ಎಂದು ಇದ್ದು ಅಲ್ಲಿ 4 ನೇ ಟಿ ಬ್ಲಾಕ್ ಎಂದು ಬರಬೇಕಿತ್ತು ಎಂದರೆ ಸರಿಯಲ್ಲ ಆ ವಿಳಾಸ ಸರಿಯಾಗಿದೆ ಎಂದು ನುಡಿಯುತ್ತಾರೆ. ಪ್ರತಿವಾದಿಯವರ ತಾಯಿಯ ಮನೆಯು 4 ನೇ ಟಿ ಬ್ಲಾಕ್ ನಲ್ಲಿ ಇದೆ ಮತ್ತು 4 ನೇ ಬ್ಲಾಕ್ ನಲ್ಲಿ ಅಲ್ಲ ಎಂದರೆ ಸಾಕ್ಷಿಯು ಎರಡೂ ಒಂದೇ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರಿದು ಆ ವಿಳಾಸದಲ್ಲಿ ಬೆಂಗಳೂರು - 41 ಎಂದು ಬರೆದಿದೆ ಅದು ಅದೇ ವಿಳಾಸಕ್ಕೆ ಸಂಬಂಧಿಸಿದ್ದು ಎಂದು ನುಡಿಯುತ್ತಾರೆ. ನಾವು 4 ನೇ ಟಿ ಬ್ಲಾಕ್ ಎಂದು ವಿಳಾಸದಲ್ಲಿ ನಮೂದಿಸದೇ ಇದ್ದುದ್ದರಿಂದ ವಾದಿಯವರು ಕಳಿಸಿದ ಎಲ್ಲಾ ಪತ್ರಗಳು ವಾಪಾಸು ಬಂದಿದೆ ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ ಮತ್ತು ಅವರು ಹೇಳಿದ್ದು ಸರಿಯಿಲ್ಲ. ಸಾಕ್ಷಿ ಮುಂದುವರಿದು ನನಗೆ ಮೇಲಿನ ವಿಳಾಸಕ್ಕೆ ಎಲ್ಲಾ ಪತ್ರಗಳು ಬರುತ್ತಿದ್ದು ವಾದಿಯವರು ಕಳಿಸಿದ ಪತ್ರ ಮಾತ್ರ ಏಕೆ ಬರಲಿಲ್ಲ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ.

7. ನಿ.ಪಿ.4 ಅಂಚೆಯ ಸ್ವೀಕೃತಿ ಮತ್ತು ನಿ.ಪಿ.5 ಸ್ಪೀಡ್ ಪೋಸ್ಟ್ ಪ್ರತಿವಾದಿಯವರ ವಿಳಾಸದ 4 ನೇ ಟಿ ಬ್ಲಾಕ್ ಗೆ ಕಳಿಸಿದ್ದು ಅದು "ಲೆಫ್ಟ್" ಎಂದು ವಾಪಾಸು ಬಂದಿದೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಸಹೋದರಿಯಾದ ಪ್ರತಿವಾದಿಯು ಸರಿಯಾದ ವಿಳಾಸವನ್ನು

ನೀಡದೇ ಇದ್ದುದ್ದರಿಂದಲೇ ವಾದಿಗೆ ಪ್ರತಿವಾದಿಯನ್ನು ಸಂಪರ್ಕಿಸಲು ಅಸಾಧ್ಯವಾಗಿದೆ ಎಂದರೆ ಸರಿಯಲ್ಲ.

8. ಈ ಕ್ರಯದ ವ್ಯವಹಾರದಲ್ಲಿ ಯತಿರಾಜ್ ಮತ್ತು ಬಸಪ್ಪರವರು ಭಾಗಿಯಾಗಿದ್ದರು ಮತ್ತು ನಿ.ಪಿ.1 ಕ್ಕೆ ಅವರೇ ಸಾಕ್ಷಿದಾರರಾಗಿ ಸಹಿ ಹಾಕಿರುತ್ತಾರೆ. ನನ್ನ ಈ ಎರಡೂ ಬ್ರೋಕರ್ ಗಳ ಮೂಲಕವೂ ವಾದಿಯವರು ಪ್ರತಿವಾದಿಗೆ ವಾದ ಪತ್ರದ ಸ್ವತ್ತಿನ ದಾಖಲೆಗಳನ್ನು ನೀಡಿದ್ದಲ್ಲಿ ಬ್ಯಾಂಕಿನಿಂದ ಸಾಲವನ್ನು ಪಡೆದು ಸ್ವತ್ತನ್ನು ಖರೀದಿಸಿ ಕ್ರಯ ಪತ್ರ ಮಾಡುವುದಾಗಿ ಪ್ರತಿವಾದಿಗೆ ವಿಷಯವನ್ನು ತಿಳಿಸಿದ್ದರು ಎಂದರೆ ಸರಿಯಲ್ಲ.

9. ನಿ.ಪಿ.5 ನ್ನು ದಿನಾಂಕ 25.11.2014 ರಂದೇ ದಾಖಲೆಗಳನ್ನು ನೀಡುವಂತೆ ಕೋರಿ ಪತ್ರವನ್ನು ಪ್ರತಿವಾದಿಗೆ ಬರೆದಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ನಿ.ಪಿ.6 ರಂತೆ ದಿನಾಂಕ 05.12.2014 ರಂದು ಅದರಲ್ಲಿ ನಮೂದಿಸಿದ ದಾಖಲೆಗಳನ್ನು ನೀಡುವಂತೆ ಸ್ಪೀಡ್ ಪೋಸ್ಟ್ ಮೂಲಕ ಪತ್ರ ಬರೆದಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ನಿ.ಪಿ.1 ರಲ್ಲಿ ಕೇಳಿದ ದಾಖಲೆಗಳನ್ನೇ ನಿ.ಪಿ.6 ರಲ್ಲಿಯೂ ಕೇಳಿರುತ್ತಾರೆ ನಾವು ಆ ದಾಖಲೆಗಳನ್ನು ಕೊಡದೇ ಇದ್ದುದ್ದರಿಂದ ಕೇಳಿರುತ್ತಾರೆ ಎಂದರೆ ಸಾಕ್ಷಿಯು ಆ ದಾಖಲೆಗಳನ್ನು ನಾನು ಅದಾಗಲೇ ನೀಡಿ ಆಗಿತ್ತು ಎಂದು ನುಡಿಯುತ್ತಾರೆ. ಅಂತಹ ದಾಖಲೆಗಳನ್ನು ಕೊಡದೇ ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

10. ವಾದಿಯವರು ಪ್ರತಿವಾದಿಯನ್ನು ಸಂಪರ್ಕಿಸಲು ಪತ್ರ ಮತ್ತು ಬ್ರೋಕರ್ ಗಳ ಮೂಲಕ ಪ್ರಯತ್ನಿಸಿದರೂ ಸಿಗದೇ ಇದ್ದಾಗ ಪೊಲೀಸ್ ಠಾಣೆ ತೆರಳಿ ನಿ.ಪಿ.15 ರಂತೆ ದೂರನ್ನು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

11. ವಾದ ಪತ್ರದ ಸ್ವತ್ತಿಗೆ ಸಂಬಂಧಿಸಿದಂತೆ ಇಸಿ, ಖಾತಾ ಸರ್ಟಿಫಿಕೇಟ್, ಖಾತಾ ನಕಲು, ಆಸ್ತಿ ತೆರಿಗೆ ರಶೀದಿಗಳು ಮತ್ತು ಸ್ಯಾಂಕ್ಷನ್ ಪ್ಲಾನನ್ನು ನಾನು ಈವರೆಗೂ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಯಾವ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ ಎಂದು ನನಗೆ ಈಗ ನೆನಪಾಗುತ್ತಿಲ್ಲ ಆದರೆ ಬ್ಯಾಂಕಿನವರು ನ್ಯಾಯಾಲಯಕ್ಕೆ ಬಂದು ಹಾಜರು ಪಡಿಸಿದ್ದನ್ನು ವಾದಿಗಳು ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂಗಿ ಪ್ರತಿವಾದಿಯವರು ಆರೋಗ್ಯವಾಗಿ ಇದ್ದಾರೆ ಎಂದರೆ ಸರಿಯಲ್ಲ. ಅವರು ಆರೋಗ್ಯವಾಗಿದ್ದರೂ ಸಹ ನ್ಯಾಯಾಲಯಕ್ಕೆ ಬಂದರೆ ಸತ್ಯ ವಿಚಾರ ಗೊತ್ತಾಗುತ್ತದೆ ಎಂದು ನಾನು ಜಿಪಿಎ ಪಡೆದು ಸಾಕ್ಷ್ಯ ನುಡಿಯಲು ಬಂದಿದ್ದೇನೆ ಎಂದರೆ ಸರಿಯಲ್ಲ. ಈ ವ್ಯವಹಾರದಲ್ಲಿ ನನಗೆ ವೈಯುಕ್ತಿಕವಾಗಿ ವಿಚಾರಗಳು ಗೊತ್ತಿಲ್ಲದೇ ಇದ್ದುದ್ದರಿಂದ ನನ್ನ ತಂಗಿ ಪ್ರತಿವಾದಿ ಬಂದು ಸಾಕ್ಷಿ ನುಡಿಯಬೇಕಾಗಿರುತ್ತದೆ ಎಂದರೆ ಸರಿಯಲ್ಲ. ನನಗೆ ಈ ದಾವೆಯ ಬಗ್ಗೆ ಮತ್ತು ವ್ಯವಹಾರದ ಬಗ್ಗೆ

ವೈಯುಕ್ತಿಕವಾಗಿ ಏನೂ ಗೊತ್ತಿಲ್ಲದೇ ಇದ್ದರೂ ಸಹ ಎಲ್ಲಾ ಗೊತ್ತಿದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

12. ವಾದಿಯವರು ನಮ್ಮ ವಾದ ಪತ್ರದ ಸ್ವತ್ತನ್ನು ಖರೀದಿಸಲು ಸಂಪೂರ್ಣ ಹಣದೊಂದಿಗೆ ತಯಾರಾಗಿದ್ದು ನಾನೇ ದಾಖಲೆಗಳನ್ನು ನೀಡದೇ ಇದ್ದುದ್ದರಿಂದ ಕ್ರಯ ಪತ್ರ ಮಾಡಲು ನಮ್ಮಿಂದಲೇ ತೊಂದರೆಯಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಿ.ಪಿ.1 ಕ್ರಯದ ಕರಾರು ಮಾಡಿದ ದಿನದಿಂದ ಇವತ್ತಿನ ತನಕ ವಾದಿಯವರ ಬಳಿ ಕ್ರಯ ಪತ್ರವನ್ನು ಮಾಡುವ ಸಂಪೂರ್ಣ ಪ್ರತಿಫಲದ ಹಣ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರಿದು ವಾದಿಯವರು ವಿಶ್ವೇಶ್ವರಯ್ಯ ಕೋ-ಆಪರೇಟಿವ್ ಬ್ಯಾಂಕಿನಿಂದ ಸಾಲ ಪಡೆದಿದ್ದು 12 ಕೋಟಿ ಹಣವನ್ನು ಬ್ಯಾಂಕಿಗೆ ಕಟ್ಟಿಲ್ಲವೆಂದು ಅವರ ಸ್ವಂತ ಮನೆಯನ್ನು ಬ್ಯಾಂಕಿನವರು ಸ್ವಾ ಧೀನ ಪಡಿಸಿಕೊಂಡಿರುತ್ತಾರೆ ಹಾಗೂ ಹರಾಜು ಪ್ರಕ್ರಿಯೆಯನ್ನು ಪ್ರಾರಂಭಿಸಿರುತ್ತಾರೆ ಮತ್ತು ನೋಟೀಸನ್ನು ಬ್ಯಾಂಕಿನವರು ಅವರ ಮನೆಯ ಗೋಡೆಗೆ ಅಂಟಿಸಿರುತ್ತಾರೆ ಎಂದು ನುಡಿಯುತ್ತಾರೆ. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

13. ಪ್ರತಿವಾದಿಗೆ ಈ ವಾದ ಪತ್ರದ ಸ್ವತ್ತನ್ನು ಬಿಟ್ಟರೆ ನನ್ನ ತಂದೆಯವರು ಕೊಟ್ಟ ಒಂದು ಭಾಗದ ಆಸ್ತಿಯು ಆಕೆಯ ಹೆಸರಿನಲ್ಲಿದೆ. ಪ್ರತಿವಾದಿಯವರು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು

ಬರಬಹುದು ಎಂದರೆ ಸಾಕ್ಷಿಯು ಆಕೆಗೆ ಅಷ್ಟು ಚೈತನ್ಯವಿಲ್ಲ ಎಂದು ನುಡಿಯುತ್ತಾರೆ.

14. ಪ್ರತಿವಾದ ಪತ್ರವನ್ನು ಸಲ್ಲಿಸುವಾಗ ನನ್ನ ತಂಗಿ ನನಗೆ ಜಿಪಿಎ ನೀಡಿದ್ದಾರೋ ಇಲ್ಲವೋ ಎಂದು ನನಗೆ ಈಗ ನೆನಪಾಗುತ್ತಿಲ್ಲ. ಪ್ರತಿವಾದ ಪತ್ರದಲ್ಲಿ ಏನೆಲ್ಲಾ ಬರೆದಿದು ಎಂಬುದು ನನ್ನ ಗಮನದಲ್ಲಿ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**